ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

ಸಿ.ಸಿ.ನಂ.996/2023

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸಂಗಪ್ಪ ತಂದೆ ಮಹಾದೇವಪ್ಪ ಕಾಚೂರು ,
ವಃ 28 ವರ್ಷ, ಉಃ ಒಕ್ಕಲುತನ,
ಸಾಃ ತೆಲ್ಲೂರ ಗ್ರಾಮ,
ತಾಃಸೇಡಂ.

-----

ಆ ಪಾ ದ ನೆ

ಅಭಿಯೋಜನೆಯವರು ಆರೋಪಿತನಾದ ನಿನ್ನ ಮೇಲೆ ಹೊರಿಸಿರುವ ಆರೋಪವೇನೆಂದರೆ, ದಿನಾಂಕ 08-06-2023 ರಂದು ಮಳಖೇಡ ಪೊಲೀಸ್ ಠಾಣಾ ವ್ಯಾಪ್ತಿಯ ಹದ್ದಿಯ ಪೈಕಿ ಆರೋಪಿತನು ಮೋಟಾರ ಸೈಕಲ ನಂ KA-32/EM -7308 ನೇದ್ದರ ಮೇಲೆ ತನ್ನ ತಾಯಿ ಗುರುಬಾಯಿಯನ್ನು ಕೂಡಿಸಿಕೊಂಡು , ಚಾಸಾ 8, 9 ರವರು ಕೂಡಾ ತಮ್ಮ ಮೊಟಾರ ಸೈಕಲ ಮೇಲೆ ಚಾಸಾ 3 ರವರ ಮನೆಶಾಂತಿಗೆ ಬಿಜ್ಜನಳ್ಳಿ ಗ್ರಾಮಕ್ಕೆ ಹೋಗಿ ಮರಳಿ ತೆಲ್ಲೂರ ಗ್ರಾಮಕ್ಕೆ ತಮ್ಮ ತಮ್ಮ ಮೋಟಾರ ಸೈಕಲಗಳ ಮೇಲೆ ಮಳಖೇಡ ಮಾರ್ಗವಾಗಿ ಮಳಖೇಡ-ಸೇಡಂ ಮುಖ್ಯ ರಸ್ತೆಯಲ್ಲಿ ತೆಲ್ಲೂರ ಗ್ರಾಮಕ್ಕೆ ಹೋಗುವಾಗ ಆರೋಪಿತನಾದ ನೀನು ನಿನ್ನ ವಶದಲ್ಲಿದ್ದ ಮೋಟಾರ ಸೈಕಲ ನಂ KA-32/EM-7308 ನೇದ್ದನ್ನು ಅತೀವೇಗ ಹಾಗೂ ನಿಷ್ಕಾಳಜಿತನನಿಂದ ಚಲಾಯಿಸಿಕೊಂಡು ಹೋಗುವಾಗ ತನ್ನ ವಶದಲ್ಲಿದ್ದ ವಾಹನದ ನಿಯಂತ್ರಣ ಕಳೆದುಕೊಂಡು ಸ್ಕಿಡ್ ಆಗಿ ವಾಹನ ಸಮೇತ ಕೆಳಗೆ ಬಿದ್ದಾಗ ಆರೋಪಿತನ ತಾಯಿಯಾದ ಗುರುಬಾಯಿ ಇವಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು , ನಂತರ ಆರೋಪಿತನು ಮತ್ತು ಚಾಸ 8, 9 ರವರು ಗುರುಬಾಯಿಯನ್ನು ಕಲಬುರಗಿಯ ಜಿಮ್ಸ್ ಆಸ್ಪತ್ರೆಗೆ ಸೇರಿಕೆ ಮಾಡಿದಾಗ ಇವಳು ಉಪಚಾರ ಫಲಿಸದೇ ಮೃತಪಟ್ಟಿದ್ದು ಇರುತ್ತದೆ ಕಾರಣ ಆರೋಪಿತನು ಹೆಲ್ಮೆಟ್ ಧರಿಸದೇ, ಚಾಲನಾ ಪರವಾನಿಗೆ ಪತ್ರ ಇಲ್ಲದೆ ಹಾಗೂ ವಾಹನದ ವಿಮೆ ಇಲ್ಲದೆ ತನ್ನ ವಶದಲ್ಲಿದ್ದ ಮೋಟಾರ ಸೈಕಲ ಅನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಅಪಘಾತ ಪಡಿಸಿದ್ದು ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 279 , 304(ಎ), ಐ.ಪಿ.ಸಿ. ಸಂಗಡ 177, 181, 196 ಐ.ಎಮ್.ವಿ. ಎಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಂಗಪ್ಪ

(ಆರೋಪಣೆಯನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ 06-06-2024

ಸಂಗಪ್ಪ

ಪ್ರ.ದ.ನ್ಯಾದಂ. ಸೇಡಂ.